# ಶ್ರೀಮಾತೆಯವರ ಪತ್ರಗಳು - ೨೦

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

### ಪತ್ರ - ೧೧೭

ಶ್ರೀ ಹರಿಯ ಕೃಪೆ

ಜನವರಿ, ೧೯೧೫
ಮಾಘ ೫, ಮಂಗಳವಾರ

ಪರಮ ಆಶೀರ್ವಾದಗಳು.

ತಾಯಿ, ನಿನ್ನ ಪತ್ರ ಸಿಕ್ಕಿತು. ನೀನು ಕಳುಹಿಸಿರುವ ಪೋಸ್ಟ್ ಕಾರ್ಡ್ ಚಂದಿಯಾಗಿ ಹೋಗಿದೆ. ಇನ್ನು ಅದರಿಂದ ಪ್ರಯೋಜನ ವಿಲ್ಲ. ನಾನು ಶಾರೀರಿಕವಾಗಿ ಅಷ್ಟೇನೂ ಚೆನ್ನಾಗಿಲ್ಲ. ನಳಿನಿ ಹಾಗೆಯೇ ಇದ್ದಾಳೆ. ಆಮೇಲೆ ನಾನು ನಿನ್ನ ಮನೆಗೆ ಹೋಗುವ ಬಗ್ಗೆ ಬರೆದಿರುವೆ. ಅದನ್ನು ಇನ್ನೂ ತೀರ್ಮಾನಿಸಿಲ್ಲ. ನಿನ್ನ ಮಗ ನಿಗೆ ಜ್ವರ ಬಂದಿದೆ ಎಂದು ಕೇಳಿ ದುಃಖವಾಯಿತು. ಇನ್ನೇನು ಬರೆಯಲಿ? ಫೋಟೋ ಬಗ್ಗೆ ಬರೆದಿರುವೆ. ಫೋಟೋ ಈಗ ಸಿಗುವುದಿಲ್ಲ. ನಿನಗೆ ನನ್ನ ಆಶೀರ್ವಾದ. ಠಾಕೂರ್ ನಿಮಗೆ ಮಂಗಳವನ್ನುಂಟು ಮಾಡಲಿ. ಇಲ್ಲಿ ಎಲ್ಲವೂ ಕ್ಷೇಮ.

ಇತಿ,
ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ನಿರುಪಮಾ ದೇವಿ*
*೪೪, ಯುರೋಪಿಯನ್ ಎಸ್ಸೈಲಮ್ ಲೇನ್*
*ಕಲ್ಕತ್ತಾ*

### ಪತ್ರ - ೧೧೮

೨.೨.೧೯೧೫
ಮಾಘ ೧೭
ನಂ. ೧, ಮುಖರ್ಜಿ ಲೇನ್
ಬಾಗ್‌ಬಜಾರ್, ಕಲ್ಕತ್ತಾ

ಶುಭವಾಗಲಿ,


ಮಗೂ, ನಿನ್ನ ಪತ್ರ ಸಿಕ್ಕಿದೆ. ಆಂತರಿಕವಾಗಿ ಶ್ರೀ ಠಾಕೂರ ರನ್ನು ಕರೆಯುತ್ತಿರು. ಅವರ ಕೃಪೆಯಿಂದ ಕ್ರಮೇಣ ನಿನ್ನ ಬಂಧ ನವು ಕಡಿದುಹೋಗುವುದು. ಇಲ್ಲಿ ಎಲ್ಲವೂ ಕ್ಷೇಮ. ನಿನಗೆ ನನ್ನ ಆಶೀರ್ವಾದ. ಆಂತರಿಕವಾಗಿ ಅವರ ನಾಮವನ್ನು ಜಪಿಸುತ್ತಿರು.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಶ್ರೀ ಸುರೇಂದ್ರ ನಾಥ ಗುಪ್ತ*
*ಪೋ. ಆ: ಕರೀಂಗಂಜ್*
*Govt Agri. Farm. (Dt Sylhet )*

### ಪತ್ರ - ೧೧೯

ಸೂಚನೆ : ಈ ಪತ್ರದ ಮೂಲ ಚಿತ್ರ ಹೀಗಿದೆ -



ಶ್ರೀ ಶ್ರೀ ಗುರುಪಾದ ಪದ್ಮದಲ್ಲಿ ಭರವಸೆ

೧೧.೩.೧೯೧೫

ಪರಮ ಶುಭಾಶೀರ್ವಾದ ,

ನಿಮ್ಮೆಲ್ಲರ ಪತ್ರದಿಂದ ಎಲ್ಲವನ್ನೂ ತಿಳಿದುಕೊಂಡೆ. ಬೃಹಸ್ಪತಿ ವಾರದಿಂದ ರಾಧುವನ್ನು ಸಾಹೇಬ್ ಡಾಕ್ಟರ್ ಚಿಕಿತ್ಸೆ ಮಾಡುತ್ತಿದ್ದಾರೆ. ಅವರು ಆಸ್ಪತ್ರೆಯ ದೊಡ್ಡ ಡಾಕ್ಟರ್. ಮತ್ತೆ ನೀನು ಶಿಶು-ತೈಲ ವನ್ನು ಸಂಗ್ರಹ ಮಾಡಲು ಸಾಧ್ಯವಾದರೆ, ಕಳುಹಿಸಿಕೊಡು. ಸಮಯಾಸಮಯವನ್ನು ನೋಡಿ ಕುಳಿತುಕೊಳ್ಳದೆ ಶುಭ ಕರ್ಮವನ್ನು ಅತಿ ಶೀಘ್ರವಾಗಿ ನಡೆಸು. ಅಕಾಲೆ ಪೂರ್ವ.. ಶಿಶು -ತೈಲ ಸಾಧ್ಯವಾದರೆ ಕಳುಹಿಸು. ನನ್ನ ಕಾಲಿನ ನೋವಿಗಾಗಿ ಆವಶ್ಯಕತೆ ಇದೆ. ನಿನಗೆ ನನ್ನ ಆಶೀರ್ವಾದ.

ಇತಿ ಮಾತೃ ದೇವಿ

***ಪತ್ರ ಪಡೆದವರ ಹೆಸರು:***
*ಯತೀಂದ್ರ ನಾಥ್ ಘೋಷ್*

## ಪತ್ರ - ೧೨೦

ಶ್ರೀ ಶ್ರೀ ರಾಮಕೃಷ್ಣ ಜಯತು

೧೯.೬.೧೯೧೫

ಜಯರಾಂಬಾಟಿ , ಶನಿವಾರ

ಶುಭವಾಗಲಿ,

ಮಗೂ, ನಿನ್ನ ಪತ್ರವು ಸಿಕ್ಕಿತು. ಕಾಶಿಯಲ್ಲಿ ತುಂಬಾ ಸುಖ ಎಂದು ವಿಭೂತಿಯಿಂದ ಕೇಳಿದೆ. ಹುಷಾರಾಗಿರು. ಇಲ್ಲಿ ಎಲ್ಲವೂ ಕ್ಷೇಮ. ಶ್ರೀಮತಿ ರಾಧು ಮಾವನ ಮನೆಗೆ ಹೋಗಿದ್ದಾಳೆ, ಅಲ್ಲಿ ಒಂದು ರೀತಿ ಚೆನ್ನಾಗಿದ್ದಾಳೆ. ಪ್ರಕಾಶ ಕಾಶಿಯಲ್ಲೇ ಇದ್ದಾನೆ. ಅವರಿಗೆ ಗೊತ್ತಿದೆ, ನನಗೊಬ್ಬರು ಅಂಥ ಚಿಕ್ಕಪ್ಪ ಇದ್ದಾರೆಂದು. ಅವರು ಕಾಶಿಯಲ್ಲಿ ವಾಸ ಮಾಡಬೇಕೆಂದಿದ್ದಾರೆ. ಅದಕ್ಕಾಗಿ ಏರ್ಪಾಡು ಮಾಡಲು ನನ್ನನ್ನು ಬಹಳ ಒತ್ತಾಯ ಮಾಡುತ್ತಿದ್ದಾರೆ. ಅವರು ಮೊತ್ತ ೬೦೦ ರೂಪಾಯಿ ತೆಗೆದುಕೊಂಡು ಹೋಗುವರು. ಅದರ ಬಡ್ಡಿಯಿಂದ ಅಲ್ಲಿ ತಂಗಬಯಸುತ್ತಿದ್ದಾರೆ. ಒಬ್ಬರೇ ವಾಸಿಸಲು ತಕ್ಕುದಾದ ಒಂದು ಮನೆ ಬೇಕು, ಅಡಿಗೆಗೆ ಬ್ರಾಹ್ಮಣನು ಬೇಕು. ಮತ್ತು ಸ್ವಂತ ಹಣದ್ದು ಮಾತ್ರ ಸೇವಿಸುವರು. ಶರತ್ ಗೆ ಬರೆಯುತ್ತೇನೆ. ಅವರಿಗಾಗಿ ಏನೇನು ಮಾಡಬೇಕೋ ಅದನ್ನು ಮಾಡು. ಇಲ್ಲಿ ಎಲ್ಲವೂ ಕ್ಷೇಮ. ನಿನಗೆ ನನ್ನ ಆಶೀರ್ವಾದ..

ಇತಿ

ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*SM . Santananda*
*Ramakrihna Advaita*
*Luxa , Banaras*

## ಪತ್ರ - ೧೨೧

ಶ್ರೀ ಶ್ರೀ ಹರಿ

೮.೭.೧೯೧೫

೨೨ನೇ ಆಷಾಢ , ಬುಧವಾರ

ಪರಮ ಆಶೀರ್ವಾದ,

ಮಗೂ, ನಿನ್ನ ಪತ್ರವು ಸಿಕ್ಕಿದೆ. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು. ಇಲ್ಲಿ ಎಲ್ಲವೂ ಕ್ಷೇಮ.

ಇತಿ ನಿಮ್ಮೆಲ್ಲರ ತಾಯಿ

ಠಾಕೂರರನ್ನು ಪ್ರಾರ್ಥಿಸು. ಆಗಲೇ ಎಲ್ಲವೂ ಸರಿ ಹೋಗುವುದು.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಶ್ರೀ ಕಾಳೀ ಪದ ರಾಯ್*
*೧೭ ನಂ ಎಲಗಿನ್ ರೋಡ್, ಭಾವಾನಿಪುರ*
*ಕಲ್ಕತ್ತಾ*

## ಪತ್ರ - ೧೨೨

ಓಂ

೨೮. ೭.೧೯೧೫

ಜಯರಾಂಬಾಟಿ, ಆಷಾಢ ೧೧

ಆಹಾ! ಅದಕ್ಕೇನಂತೆ !

ನೀನು ನಿರಾಶನಾಗುವ ಯಾವ ಅವಶ್ಯಕತೆ ಇಲ್ಲ. ವಿವಾಹ ಮಾಡಿಕೊಂಡಿರುವೆ, ಅದಕ್ಕೇನಂತೆ? ಚೆನ್ನಾಗಿಯೇ ನಡೆಯುವುದು. ಠಾಕೂರರ ನಾಮದಲ್ಲಿ ಭರವಸೆ ಇಡು. ಮತ್ತು ಪತ್ನಿಗೆ ಒಳ್ಳೆಯ ಪುಸ್ತಕಗಳನ್ನು ಕೊಡು. ಹಾಗೂ ಉಪದೇಶವನ್ನು ಮಾಡು. ಇಲ್ಲಿ ಕ್ಷೇಮ. ನಿನಗೆ ನನ್ನ ಆಶೀರ್ವಾದ.

ಆಶೀರ್ವಾದ ನೀಡುತ್ತಿರುವ

ನಿನ್ನ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಶ್ರೀ ನಿಶಿಕುಮಾರ್ ಗಂಗೋಪಾಧ್ಯಾಯ*
*ಪೋ : ಇಬ್ರಾಹಿಂಪುರ Ibrahimpur*
*Via Nabinagar , ಗ್ರಾಮ: ಇಬ್ರಾಹಿಂಪುರ*
*ಜಿಲ್ಲೆ : ತ್ರಿಪುರ , Dt Trippurah*

"ನಿನ್ನ ಸಾಧನೆ, ಮಾತು ಹಾಗೂ ನಡತೆ ಇವುಗಳಲ್ಲಿ ಪ್ರಾಮಾಣಿಕನಾಗಿರು. ಇದರಿಂದ ನೀನು ಧನ್ಯನಾಗುವೆ! ಜಗತ್ತಿನಲ್ಲಿರುವ ಎಲ್ಲ ಜೀವಿಗಳ ಮೇಲೂ ಭಗವಂತನ ಕೃಪೆ ಸರ್ವದಾ ಹರಿದು ಬರುತ್ತಿದೆ. ಅದಕ್ಕಾಗಿ ಕೇಳಬೇಕಾಗಿಲ್ಲ.. ದೇವರಿಗೆ ಬೇಕಾಗಿರುವುದು ಪ್ರಾಮಾಣಿಕತೆ, ಸತ್ಯಸಂಧತೆ ಮತ್ತು ಪ್ರೇಮ." — ಶ್ರೀಮಾತೆ ಶಾರದಾದೇವಿ

*('ಶ್ರೀಶಾರದಾ ಸೂಕ್ತಿ', ಪು.೨೧-೨೨)*